ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 24-05-1971

***ಸ್ವ ಸ್ಥಿತಿಯಲ್ಲಿ ಸ್ಥಿತರಾಗುವುದರಿಂದ ವಿರೋಧ ಸಮಾಪ್ತಿ*** (पोज़ीशन में ठहरने से अपोज़ीशन समाप्त)

ಸರ್ವ ಆತ್ಮರ ಸುಖ ಮತ್ತು ಶಾಂತಿಕರ್ತಾ ಆಗಿರುವಿರಾ? ಏಕೆಂದರೆ ದುಃಖಹರ್ತಾ ಸುಖಕರ್ತಾನ ಬಹಳ ಸಮಯದಿಂದ ಅಗಲಿ ಸಿಕ್ಕಿರುವ ಮಕ್ಕಳಾಗಿರುವಿರಿ, ಅಂದ ಮೇಲೆ ತಂದೆಯ ಕರ್ತವ್ಯವೇ ಮಕ್ಕಳ ಕರ್ತವ್ಯವಾಗಿದೆ. ಯಾರು ವಿಶ್ವದ ಕಲ್ಯಾಣಕರ್ತಾ ಮತ್ತು ಸುಖಕರ್ತಾ ಆಗಿದ್ದಾರೆ ಅವರ ಬಳಿ ಎಂದೂ ದುಃಖದ ಅಲೆ ಸ್ವಪ್ನದಲ್ಲಿಯಾಗಲೀ ಅಥವಾ ಸಂಕಲ್ಪದಲ್ಲಿಯಾಗಲೀ ಬರಲು ಸಾಧ್ಯವಿಲ್ಲ. ಆದ್ದರಿಂದ ಇಂತಹ ಸ್ಥಿತಿ ಮಾಡಿಕೊಳ್ಳುತ್ತಿರುವಿರೋ ಅಥವಾ ಈ ಸ್ಥಿತಿಯಲ್ಲಿ ಸ್ಥಿತರಾಗಿರುತ್ತಿರೋ. ಎಂದಿನಿಂದ ಹೊಸ ಜನ್ಮ ಪಡೆದಿರಿ, ಬಾಪ್ ದಾದಾ ಅವರ ಪ್ರಿಯ ಮಕ್ಕಳಾದಿರಿ, ಅಂದ ಮೇಲೆ ಸರ್ವ ಶಕ್ತಿವಂತನ ಸಂತಾನರ ಬಳಿ ಯಾವ ಸಂತಾಪ ಬರಲು ಸಾಧ್ಯವಿಲ್ಲ. ಸರ್ವಶಕ್ತಿವಂತ ತಂದೆಯ ಸ್ಮೃತಿ ಇರುವುದಿಲ್ಲ ಅಥವಾ ಪ್ರ್ಯಾಕ್ಟಿಕಲ್‌ನಲ್ಲಿ ಅವರ ಸಂತಾನ ಆಗಿರುವುದಿಲ್ಲವೋ ಅಲ್ಲಿಯವರೆಗೆ ಸಂತಾಪ ಅರ್ಥಾತ್ ದುಃಖದ ಅಲೆ ಇರುತ್ತದೆ. ಸುಖದ ಸಾಗರ, ತಂದೆಯ ಸಂತಾನ ಅಂದ ಮೇಲೆ ದುಃಖದ ಅಲೆ ಏನಾಗಿರುತ್ತದೆ ಎಂಬುದರಿಂದ ಸಹ ಅಪರಿಚಿತ ಆಗಿರುತ್ತಾರೆ. ಸುಖದ ಅಲೆಯಲ್ಲಿಯೇ ಆಡುತ್ತಾರೆ, ಮಾಯೆಯ ವಿರೋಧ ಏನು? ವಿರೋಧದ ನಿವಾರಣೆ ಬಹಳ ಸಹಜವಾಗಿದೆ. ಆಪೋಜಿಶನ್‌ನಿಂದ(ವಿರೋಧ) ಕೇವಲ ತೆಗೆದುಹಾಕಿರಿ. ಆಗ ಏನಾಗುವುದು? ಪೊಜಿಶನ್‌ನಲ್ಲಿ (ಸ್ವ ಸ್ಥಿತಿ) ಸ್ಥಿತರಾಗಿರುವುದರಿಂದ ವಿರೋಧ ಬರುವುದೇ? ನಿಮ್ಮ ಸ್ವಸ್ಥಿತಿಯಲ್ಲಿ ಸ್ಥಿತರಾಗಿದ್ದರೆ ಮಾಯೆ ವಿರೋಧ ಮಾಡಲು ಸಾಧ್ಯವಿಲ್ಲ. ಕೇವಲ ಒಂದು ಶಬ್ದವನ್ನು ತೆಗೆದು ಹಾಕಬೇಕು. ನಿಮ್ಮ ಸ್ವ ಸ್ಥಿತಿಯಲ್ಲಿರಬೇಕು - ಇದೇ ನೆನಪಿನ ಯಾತ್ರೆ ಆಗಿದೆ. ಕಠಿಣವಿದೆಯೇ? ಯಾರು ಹೇಗೆ ಇರುವರೋ ಹಾಗೆಯೇ ತಮ್ಮನ್ನು ಒಪ್ಪಿಕೊಳ್ಳುವುದು ಕಷ್ಟವೇ? ನೀವು ನಿಜ ರೂಪವನ್ನು ಮರೆತಿರುವಿರಿ, ಅದರಲ್ಲಿ ಸ್ಥಿತರಾಗುವ ಶಿಕ್ಷಣ ನಿಮಗೆ ಸಿಕ್ಕಿದೆ ಅಂದ ಮೇಲೆ ನಿಜ ರೂಪದಲ್ಲಿ ಸ್ಥಿತಿರಾಗುವುದು ಕಷ್ಟವೋ ಅಥವಾ ನಕಲಿ ರೂಪದಲ್ಲಿ ಸ್ಥಿತರಾವುದು ಕಷ್ಟವೋ? ಹೋಳಿ ಅಥವಾ ದಸರಾದಲ್ಲಿ ಮಕ್ಕಳು ನಕಲಿ ಮುಖವಾಡ ಹಾಕಿಕೊಳ್ಳುತ್ತಾರೆ, ಅವರಿಗೆ ಈ ನಕಲಿ ಮುಖವಾಡ ತೆಗೆದು ನಿಮ್ಮ ನಿಜ ರೂಪ ತೋರಿಸಿರಿ ಎಂದರೆ ಕಷ್ಟವಾಗುವುದೇ? ಎಷ್ಟು ಸಮಯ ಹಿಡಿಯುತ್ತದೆ? ನೀವೂ ಸಹ ಈ ಆಟ ಆಡಿದ್ದೀರಿ ಅಲ್ಲವೆ? ಯಾವ ಯಾವ ಮುಖವಾಡ ಹಾಕಿದ್ದೀರಿ? ಕೆಲವು ಬಾರಿ ಕೋತಿಯದು, ಅಸುರರದು, ರಾವಣನದು. ಎಷ್ಟು ನಕಲಿ ಮುಖವಾಡ ಹಾಕಿದ್ದೀರಿ? ಈಗ ತಂದೆ ಏನು ಹೇಳುತ್ತಿದ್ದಾರೆ? ಆ ನಕಲಿ ಮುಖವಾಡ ತೆಗೆಯಿರಿ, ಇದರಲ್ಲಿ ಏನು ಕಷ್ಟವಿದೆ? ಆದ್ದರಿಂದ ನಮ್ಮ ನಿಜ ಸ್ವರೂಪ, ನಿಜ ಧರ್ಮ, ನಿಜ ಕರ್ಮ ಯಾವುದು? ಈ ನಶೆ ಸದಾ ಇರಬೇಕು. ಸತ್ಯ ಜ್ಞಾನದ ಮಾಸ್ಟರ್ ಜ್ಞಾನಪೂರ್ಣರು ನಾವಾಗಿದ್ದೇವೆ ಎನ್ನುವ ನಶೆ ಕಡಿಮೆ ಏನು? ಈ ನಶೆ ಸದಾ ಇದ್ದರೆ ಏನಾಗುವಿರಿ? ಏನಾಗುವಿರಿ ಅದರ ಸ್ಮೃತಿಚಿಹ್ನೆ ನೋಡಿರುವಿರಿ ಅಲ್ಲವೇ? ದಿಲವಾಲಾ ಮಂದಿರ ತಪಸ್ವೀ ಕುಮಾರ ತಪಸ್ವೀ ಕುಮಾರಿಯರ ಸ್ಮೃತಿಚಿಹ್ನೆ ಆಗಿದೆ. ಮತ್ತು ಸದಾ ನಶೆಯಲ್ಲಿ ಸ್ಥಿತರಾಗಿರುವವರ ಸ್ಮೃತಿಚಿಹ್ನೆ ಯಾವುದು? ಅಚಲಗರ್. ಸದಾ ಆ ನಶೆಯಲ್ಲಿರುವುದರಿಂದ ಅಚಲ ಅಡೋಲ ಆಗುವಿರಿ. ಆಗ ಮಾಯೆ ಸಂಕಲ್ಪ ರೂಪದಲ್ಲಿಯೂ ಸಹ ಅಲ್ಲಾಡಿಸಲು ಸಾಧ್ಯವಿಲ್ಲ. ಈ ರೀತಿ ಅಚಲರಾಗುವಿರಿ, ರಾವಣ ಸಂಪ್ರದಾಯದವರು ಕಾಲು ಅಲ್ಲಾಡಿಸಲು ಪ್ರಯತ್ನ ಮಾಡಿದರು ಆದರೆ ಸ್ವಲ್ಪವೂ ಅಲ್ಲಾಡಿಸಲು ಸಾಧ್ಯವಾಗಲಿಲ್ಲ ಎಂದು ಸ್ಮೃತಿಚಿಹ್ನೆ ಇದೆ. ಇದು ನಮ್ಮ ಸ್ಮೃತಿಚಿಹ್ನೆ ಎನ್ನುವ ನಶೆ ಇರುತ್ತದೆಯೇ? ಇದು ನನ್ನ ಸ್ಮೃತಿಚಿಹ್ನೆ - ಈ ರೀತಿ ನಿಶ್ಚಯ ಬುದ್ಧಿಯಾಗುವುದರಿಂದ ವಿಜಯ ಅವಶ್ಯ ಪ್ರಾಪ್ತಿ ಆಗುತ್ತದೆ. ಇದು ಬೇರೆ ಮಹಾರಥಿಗಳದು, ನಾವಂತೂ ಪುರುಷಾರ್ಥಿಯಾಗಿದ್ದೇವೆ ಎಂದು ಯಾವತ್ತೂ ವಿಚಾರ ಮಾಡಬೇಡಿ. ನಿಶ್ಚಯದಲ್ಲಿ, ಸ್ವರೂಪದ ಸ್ಮೃತಿಯಲ್ಲಿಯೇ ದುರ್ಬಲತೆ ಬಂದರೆ ಕರ್ಮದಲ್ಲಿಯೂ ದುರ್ಬಲತೆ ಬರುತ್ತದೆ. ಆದ್ದರಿಂದ ಸದಾ ಪ್ರತಿ ಸಂಕಲ್ಪ ನಿಶ್ಚಯಬುದ್ಧಿಯದ್ದಾಗಿರಬೇಕು. ಕರ್ಮ ಮಾಡುವ ಮೊದಲು ನಮ್ಮ ವಿಜಯ ಆಗಿಯೇ ಇದೆ ಎಂದು ನಿಶ್ಚಯ ಮಾಡಿಕೊಳ್ಳಿ. ಅನೇಕ ಕಲ್ಪ ವಿಜಯೀ ಆಗಿದ್ದೇವೆ. ಅನೇಕ ಕಲ್ಪ, ಅನೇಕ ಬಾರಿ ವಿಜಯೀ ಆಗಿ ವಿಜಯ ಮಾಲೆಯಲ್ಲಿ ಬರುವಂತಹ, ಪೂಜಿಸಲ್ಪಡುವವರು ಆಗಿರುವಿರಿ,

ಅಂದ ಮೇಲೆ ಈಗ ಅದನ್ನು ಪುನರಾವರ್ತನೆ ಮಾಡುವುದಿಲ್ಲವೆ? ಮಾಡಿರುವ ಅದೇ ಕರ್ಮವನ್ನು ಪುನಃ ಮಾಡಬೇಕು. ಆದ್ದರಿಂದ ಮಾಡಿ ಮಾಡಲ್ಪಟ್ಟದ್ದು.. . . ಎಂದು ಹೇಳಲಾಗುತ್ತದೆ. ಮಾಡಲ್ಪಟ್ಟಿದೆ ಆದರೆ ಈಗ ಅದನ್ನು ಪುನಃ ಮಾಡಿ, ಮಾಡಿ ಮಾಡಲ್ಪಟ್ಟದ್ದು ಎನ್ನುವ ಹೇಳಿಕೆಯನ್ನು ಪೂರ್ಣ ಮಾಡಬೇಕು. ಯಾವಾಗ ನಿಶ್ಚಯ ಆಗುತ್ತದೆ, ನಾನು ಆಗಿದ್ದೇನೆ, ಅಥವಾ ನಾನು ಇದನ್ನು ಮಾಡಬೇಕು, ನಾನು ಮಾಡಬಲ್ಲೆ ಆಗ ನಶೆ ಏರುತ್ತದೆ. ನಿಶ್ಚಯ ಇಲ್ಲದಿದ್ದರೆ ನಶೆಯೂ ಏರುವುದಿಲ್ಲ ಮತ್ತು ನಿಶ್ಚಯ ಇದ್ದರೆ ನಶೆಯ ಸ್ಥಿತಿಯ ಸಾಗರದಲ್ಲಿ ಆಟವಾಡುವಿರಿ. ಇಂತಹ ಸ್ಥಿತಿಯ ಅನುಭವಿ ಮೂರ್ತಿ ಆದಾಗ ನಿಮ್ಮ ಮೂರ್ತಿಯಿಂದ ಕಲಿಸುವವರ ಚಹರೆ ಕಂಡು ಬರುವುದು, ನಿಮ್ಮ ಮೂರ್ತಿಯಿಂದ ತಂದೆ ಮತ್ತು ಶಿಕ್ಷಕನ ಚಹರೆ ಪ್ರತ್ಯಕ್ಷ ಆಗುವಂತಹ ಅನುಭವಿ ಮೂರ್ತಿ ಆಗಿರುವಿರಾ? ಈ ರೀತಿ ಆಗಿರುವಿರೋ ಅಥವಾ ಆಗುತ್ತಿರುವಿರೋ? ಸಫಲತೆಯ ನಕ್ಷತ್ರಗಳಾಗಿರುವಿರೋ ಅಥವಾ ಭರವಸೆಯ ನಕ್ಷತ್ರಗಳೋ? ಸಫಲತೆ ಜನ್ಮ ಸಿದ್ಧ ಅಧಿಕಾರವಾಗಿದೆ. ಏಕೆಂದರೆ ಸರ್ವ ಶಕ್ತಿವಂತ ಎಂದು ಹೇಳುತ್ತೀರಿ. ಅಸಫಲತೆಯ ಕಾರಣ ಶಕ್ತಿಹೀನತೆಯಾಗಿದೆ. ಶಕ್ತಿಯ ಕೊರತೆಯ ಕಾರಣ ಮಾಯೆಗೆ ಸೋಲುತ್ತೀರಿ. ಸರ್ವಶಕ್ತಿವಂತ ತಂದೆಯ ಸ್ಮೃತಿಯಲ್ಲಿರುವಾಗ ಸರ್ವ ಶಕ್ತಿವಂತನ ಮಕ್ಕಳಾಗಿರುವ ಕಾರಣ ಸಫಲತೆ ಜನ್ಮ ಸಿದ್ಧ ಅಧಿಕಾರ ಆಯಿತು. ಪ್ರತಿ ಸೆಕೆಂಡ್ ಸಫಲತೆ ಸಮಾವೇಶವಾಗಿರಬೇಕು. ಅಸಫಲತೆಯ ದಿನಗಳು ಸಮಾಪ್ತವಾದವು. ಈಗ ಸಫಲತೆ ನಮ್ಮ ಘೋಷಣೆಯಾಗಿದೆ - ಇದನ್ನು ಸ್ಮೃತಿಯಲ್ಲಿಟ್ಟುಕೊಳ್ಳಿ

ಒಂದು ಸೆಕೆಂಡಿನಲ್ಲಿ ನಿಮ್ಮನ್ನು ನಕಲಿಯಿಂದ ನಿಜ ರೂಪ ಮಾಡಿಕೊಳ್ಳಲು ಸಾಧ್ಯವಾಗುವಂತಹ ಬಹಳ ಸಹಜ ಸರಳ ಮಾರ್ಗವಿದೆ. ಇಂತಹ ಸರಳ ಮಾರ್ಗ ಯಾವಾಗ ಸಿಗುತ್ತದೆ? ಎಂದೂ ಇಲ್ಲ, ಮಾಯೆಗೆ ಅಧೀನ ಯಾವಾಗ ಆಗುತ್ತೀರಿ? ಏಕೆಂದರೆ ಸರ್ವಶಕ್ತಿವಂತನ ಮಕ್ಕಳು ಎನ್ನುವುದನ್ನು ಮರೆತಿರುತ್ತೀರಿ. ಈಗಿನ ಕಾಲದಲ್ಲಿ ಅಲ್ಪ ಸ್ವಲ್ಪ ಅಧಿಕಾರ ಇರುವವರು ಎಷ್ಟು ನಶೆಯಿಂದ ಇರುತ್ತಾರೆ! ಅಂದ ಮೇಲೆ ಸರ್ವಶಕ್ತಿಯ ಅಧಿಕಾರ ಇರುವವರು ಎಷ್ಟು ನಶೆಯಿಂದ ಇರಬೇಕು? ಶಾಸ್ತ್ರವಾದಿಗಳು ಯಾರು ತಮ್ಮನ್ನು ಶಾಸ್ತ್ರದ ಅಧಿಕಾರಿ ಎಂದು ತಿಳಿಯುತ್ತಾರೆಯೋ ಅವರೂ ಸಹ ಎಷ್ಟು ನಶೆಯಲ್ಲಿ, ಉಲ್ಟಾ ಜ್ಞಾನದ ನಶೆಯಲ್ಲಿರುತ್ತಾರೆ. ಯಾರು ಹೇಳಿದ್ದಾರೆ, ಯಾರು ನೋಡಿದ್ದಾರೆ, ಯಾವುದೂ ಗೊತ್ತಿಲ್ಲ. ಆದರೂ ಶಾಸ್ತ್ರದ ಅಧಿಕಾರಿ ಎಂದು ತಿಳಿಯುವುದರಿಂದ ತಮ್ಮ ಸೋಲನ್ನು ಎಂದೂ ಒಪ್ಪಿಕೊಳ್ಳುದಿಲ್ಲ. ನಿಮ್ಮದು ಸರ್ವ ಶ್ರೇಷ್ಠ ಅಧಿಕಾರ ಇದೆ. ಇಂತಹ ಅಧಿಕಾರದಿಂದ ನೀವು ಯಾರ ಮುಂದೆ ಹೋದರೂ ಅವರು ತಲೆಬಾಗುವರು. ನೀವು ಬಾಗಲು ಸಾಧ್ಯವಿಲ್ಲ. ಆದ್ದರಿಂದ ನಿಮ್ಮ ಅಧಿಕಾರವನ್ನು ಸ್ಥಿರವಾಗಿಟ್ಟುಕೊಳ್ಳಿ. ನೀವು ವಿಶ್ವವನ್ನು ಬಾಗಿಸುವವರಾಗಿದ್ದೀರಿ. ಯಾರು ವಿಶ್ವವನ್ನು ಬಾಗಿಸುವವರಾಗಿದ್ದಾರೆ ಅವರು ಯಾರ ಮುಂದೆಯೂ ಬಾಗಲು ಸಾಧ್ಯವಿಲ್ಲ. ಇಂತಹ ಅಧಿಕಾರದ ನಶೆಯಿಂದ ಯಾವುದೇ ಆತ್ಮದ ಕಲ್ಯಾಣ ಮಾಡಲು ಸಾಧ್ಯವಿದೆ. ಇಂತಹ ನಶೆಯನ್ನು ಎಂದೂ ಮರೆಯಬೇಡಿ. ಬಹಳ ಸಮಯದಿಂದ ಮರೆಯದಂತಹವರು ಆದಾಗ ಭವಿಷ್ಯದಲ್ಲಿ ಬಹಳ ಸಮಯದವರೆಗೆ ರಾಜ್ಯ ಭಾಗ್ಯ ಪ್ರಾಪ್ತವಾಗುತ್ತದೆ. ಅಲ್ಪ ಕಾಲದವರೆಗೆ ನಶೆಯಲ್ಲಿದ್ದರೆ ರಾಜ್ಯ ಭಾಗ್ಯವೂ ಅಲ್ಪ ಕಾಲದವರೆಗೆ ಪ್ರಾಪ್ತಿ ಆಗುತ್ತದೆ. ಈಗ ಇಲ್ಲಿ ಬಂದಿರುವುದು ಸದಾಕಾಲದ ಆಸ್ತಿ ಪ್ರಾಪ್ತಿ ಮಾಡಿಕೊಳ್ಳಲು, ಅಲ್ಪ ಕಾಲದ್ದಲ್ಲ. ಕೇವಲ ಎರಡು ಮಾತುಗಳನ್ನು ಜೊತೆ ಜೊತೆಯಲ್ಲಿ ನೆನಪಿಟ್ಟುಕೊಳ್ಳಿ. ಮಾತು ಒಂದೇ, ಶಬ್ದಗಳು ಭಿನ್ನ ಭಿನ್ನವಾಗಿವೆ. ಬಹಳ ಸಹಜಕ್ಕಿಂತ ಸಹಜ ಎರಡು ಮಾತುಗಳನ್ನು ಸರಳ ಶಬ್ದಗಳಲ್ಲಿ ಏನು ಕಲಿಸಲಾಗುತ್ತದೆ? ಈ ರೀತಿ ಎರಡೆರಡು ಶಬ್ದಗಳನ್ನು ಸದಾ ನೆನಪಿಟ್ಟುಕೊಳ್ಳಿ ಆಗ ಸ್ಥಿತಿ ಏರು ಪೇರಾಗುವುದಿಲ್ಲ. ಎರಡು ಶಬ್ದದ ಮಾತು, ಯಾವ ಮಗುವಿಗಾದರೂ ತಂದೆ ಮತ್ತು ಆಸ್ತಿ ಎರಡು ಶಬ್ದ ನೆನಪಿಟ್ಟುಕೊಳ್ಳಲು ಹೇಳಿದರೆ ಅದನ್ನು ಮರೆಯುವನೇನು? ನೀವು ಮಾಸ್ಟರ್ ಸರ್ವಶಕ್ತಿವಂತರು ಮರೆಯಲು ಸಾಧ್ಯವೇ? ಯಾವ ಸಮಯದಲ್ಲಿ ವಿಸ್ಮೃತಿಯ ಸ್ಥಿತಿ ಇರುತ್ತದೆಯೋ ಆಗ ನಿಮ್ಮೊಂದಿಗೆ ನೀವು ಮಾತನಾಡಿ ನಾನು ಮಾಸ್ಟರ್ ಸರ್ವಶಕ್ತಿವಂತ ತಂದೆ ಮತ್ತು ಆಸ್ತಿಯನ್ನು ಮರೆತುಬಿಟ್ಟೆನಲ್ಲ!ಇಂತಹ ಮಾತಗಳನ್ನು ಆಡುವುದರಿಂದ ಕಳೆದುಕೊಂಡಿರುವ ಶಕ್ತಿ ಪುನಃ ಸ್ಮೃತಿಗೆ ಬರುತ್ತದೆ. ಕೇವಲ ಮನನ ಮತ್ತು ವರ್ಣನೆ ಮಾಡಬೇಕು. ಮೊದಲು ಮನನ ಮಾಡಿ ನಂತರ ವರ್ಣನೆ ಮಾಡಿರಿ. ಯಾವ ಮಾತನ್ನು ಮನನ ಮಾಡುತ್ತೀರಿ ಅದನ್ನು ವರ್ಣನೆ ಮಾಡುವುದು ಸಹಜವಾಗುತ್ತದೆ. ಹೀಗೆ ಮನನ ಮಾಡುತ್ತಾ ವರ್ಣನೆ ಮಾಡುತ್ತಾ ಹೋಗಿರಿ, ಇದೂ ಸಹ ಎರಡು ಮಾತಾಯಿತು. ಮನನ ಮಾಡುತ್ತಾ ಮಗ್ನಾವಸ್ಥೆ ತನಗೆ ತಾನೇ ಆಗುತ್ತದೆ. ಯಾರಿಗೆ

ಮನನ ಮಾಡಲು ಬರುವುದಿಲ್ಲವೋ ಅವರಿಗೆ ಮಗ್ನಾವಸ್ಥೆಯ ಅನುಭವ ಮಾಡುವುದು ಸಾಧ್ಯವಾಗುವುದಿಲ್ಲ. ಕಿರೀಟ ಮತ್ತು ಸಿಂಹಾಸನಾಸೀನ ಈಗ ಆಗಿರುವಿರೋ ಅಥವಾ ಭವಿಷ್ಯದಲ್ಲಿ ಆಗುವಿರೋ? ಈಗ ಕಿರೀಟ ಮತ್ತು ಸಿಂಹಾಸನ ಇಲ್ಲವಲ್ಲ. ಭಿಕ್ಷುಕ ರಾಗಿರುವಿರಾ? ಸಂಗಮಯುಗದ ಸಿಂಹಾಸನ ಗೊತ್ತಿಲ್ಲವೆ? ಇಡೀ ಕಲ್ಪದಲ್ಲಿ ಎಲ್ಲದಕ್ಕಿಂತ ಶ್ರೇಷ್ಠ ಸಿಂಹಾಸನ ಗೊತ್ತಿಲ್ಲವೆ? ಬಾಪ್ ದಾದಾ ಅವರ ಹೃದಯ ಸಿಂಹಾಸನಾಸೀನ ಆಗಿಲ್ಲವೆ? ನೆನಪಿದ್ದರೆ ಕುಳಿತುಕೊಳ್ಳುವಿರಿ ಅಲ್ಲವೆ. ಸಿಂಹಾಸನವಿದ್ದರೆ ಕಿರೀಟವೂ ಇರುತ್ತದೆ. ಕಿರೀಟವಿಲ್ಲದೆ ಸಿಂಹಾಸನವಿರುವುದಿಲ್ಲ. ಬಾಪ್ ದಾದಾ ಸಂಗಮ ಯುಗದಲ್ಲಿಯೇ ಕಿರೀಟ ಮತ್ತು ಸಿಂಹಾಸನಾಸೀನ ಮಾಡುತ್ತಾರೆ. ಈ ಕಿರೀಟ ಮತ್ತು ಸಿಂಹಾಸನದ ಆಧಾರದಿಂದ ಭವಿಷ್ಯದ ಕಿರೀಟ ಮತ್ತು ಸಿಂಹಾಸನ ಸಿಗುತ್ತದೆ. ಈಗ ಧಾರಣೆ ಮಾಡದಿದ್ದರೆ ಭವಿಷ್ಯದಲ್ಲಿ ಹೇಗೆ ಧಾರಣೆ ಮಾಡುವಿರಿ. ಆಧಾರವಂತೂ ಸಂಗಮ ಯುಗವಾಗಿದೆಯಲ್ಲವೆ. ಕಿರೀಟವನ್ನು ಸಹ ಧಾರಣೆ ಮಾಡಬೇಕು, ತಿಲಕವನ್ನೂ ಧಾರಣೆ ಮಾಡಬೇಕು ಮತ್ತು ಸಿಂಹಾಸನಾಸೀನ ಸಹ ಆಗಬೇಕು. ಕಿರೀಟ, ತಿಲಕ ಮತ್ತು ಸಿಂಹಾಸನ, ಈ ಮೂರೂ ಸಂಗಮ ಯುಗದ ದೊಡ್ಡ ಪ್ರಾಪ್ತಿಯಾಗಿವೆ. ಈ ಪ್ರಾಪ್ತಿಗಳ ಮುಂದೆ ಭವಿಷ್ಯ ರಾಜ್ಯ ಏನೂ ಇಲ್ಲ. ಯಾರು ಸಂಗಮ ಯುಗದ ಕಿರೀಟ ಮತ್ತು ಸಿಂಹಾಸನ ತೆಗೆದುಕೊಂಡಿಲ್ಲವೋ ಅವರು ಏನನ್ನೂ ತೆಗೆದುಕೊಂಡಿಲ್ಲ. ವಿಶ್ವ ಕಲ್ಯಾಣದ ಜವಾಬ್ದಾರಿಯ ಕಿರೀಟವಿದೆ. ಎಲ್ಲಿಯವರೆಗೆ ಈ ಕಿರೀಟವನ್ನು ಧಾರಣೆ ಮಾಡುವುದಿಲ್ಲವೋ ಅಲ್ಲಿಯವರೆಗೆ ತಂದೆಯ ಹೃದಯ ಸಿಂಹಾಸನದಲ್ಲಿ ವಿರಾಜಮಾನ ಆಗಲು ಸಾಧ್ಯವಿಲ್ಲ. ನಿಮ್ಮ ಹಕ್ಕನ್ನು ಜಮಾ ಮಾಡಿ ಹೋಗಬೇಕು. ಇಲ್ಲವಾದರೆ ಬಹಳ ಕಷ್ಟವಾಗುತ್ತದೆ. ಮಧುಬನದಲ್ಲಿ ಕಿರೀಟ ಮತ್ತು ಸಿಂಹಾಸನಾಸೀನ ಆಗಿ ಹೋಗಬೇಕು. ಯಾವಾಗ ಸಾಹಸಿಗಳು, ನಿಶ್ಚಯಬುದ್ಧಿ ಆಗುತ್ತೀರಿ ಅಗ ಮಾತ್ರ ಮಧುಬನಕ್ಕೆ ಕಿರೀಟ ಧಾರಣೆ ಮಾಡಲು ಬರುತ್ತಿರಿ ಕಿರೀಟವಿಲ್ಲದೇ ಹೋಗಬೇಡಿ, ಬಾಪ್ ದಾದಾ ಅವರ ಸಿಂಹಾಸನ ಎಷ್ಟು ದೊಡ್ಡದೆಂದರೆ ಎಲ್ಲರೂ ವಿರಾಜಮಾನ ಆಗಬಹುದು. ಆ ಸ್ಥೂಲ ಸಿಂಹಾಸನದಲ್ಲಿ ಎಲ್ಲರೂ ಕುಳಿತುಕೊಳ್ಳಲು ಸಾಧ್ಯವಿಲ್ಲ. ಆದರೆ ಈ ಸಿಂಹಾಸನ ದೊಡ್ಡದಾಗಿದೆ. ಅತ್ಯಂತ ದೊಡ್ಡ ತಂದೆಯ ಮಕ್ಕಳು, ಅತೀ ದೊಡ್ಡ ಸಿಂಹಾಸನದ ಮೇಲೆ ಕುಳಿತುಕೊಳ್ಳುತ್ತಾರೆ. ಒಳ್ಳೆಯದು.

ಅವ್ಯಕ್ತ ಮುರಳಿ 24-05-1971.

***ಸ್ವ ಸ್ಥಿತಿಯಲ್ಲಿ ಸ್ಥಿತರಾಗುವುದರಿಂದ ವಿರೋಧ ಸಮಾಪ್ತಿ***

ಆತ್ಮಿಕ ಸ್ಥಿತಿಯಲ್ಲಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಪ್ರೇಮ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಸುಖ ಸ್ವರೂಪ.

2. ನಾನು ಶಾಂತ ಸ್ವರೂಪ.

3. ನಾನು ಬಾಪ್ ಸಮಾನ ದುಃಖಹರ್ತಾ ಮತ್ತು ಸುಖಕರ್ತಾ ಆಗಿದ್ದೇನೆ.

4. ವಿಶ್ವ ಕಲ್ಯಾಣಕಾರಿಯಾದ ನಾನು ದುಃಖವನ್ನು ಸಮಾಪ್ತಿ ಮಾಡಿ ಸುಖದ ಅಲೆಯಲ್ಲಿ ತೇಲಾಡುತ್ತಿದ್ದೇನೆ.

5. ನಾನು ಮಾಸ್ಟರ್ ಸರ್ವಶಕ್ತಿವಂತನು.

6. ನಾನು ನನ್ನ ಸ್ವ ಸ್ಥಿತಿಯಲ್ಲಿದ್ದು ಮಾಯೆಯ ವಿರೋಧವನ್ನು ಸಮಾಪ್ತಿ ಮಾಡಿದ್ದೇನೆ.

7. ನಾನು ನನ್ನ ನಿಜ ಸ್ವರೂಪ (ಆತ್ಮ) ಮತ್ತು ನನ್ನ ಧರ್ಮ ಮತ್ತು ಕರ್ಮದಲ್ಲಿ ಸ್ಥಿತವಾಗಿ ಸ್ಥಿರವಾಗಿರುವ ಮಾಯಾಜೀತ್ ಸ್ವರೂಪ.

8. ನಾನು ನಿಶ್ಚಯ ಬುದ್ಧಿ ಸ್ವರೂಪ.

9. ನಾನು ಕಲ್ಪಕಲ್ಪದ ವಿಜಯಿರತ್ನ, ಸಫಲತೆ ನನ್ನ ಜನ್ಮ ಸಿದ್ಧ ಅಧಿಕಾರ.

10. ನಾನು ನನ್ನ ಅನುಭವದಿಂದ ತಂದೆಯನ್ನು ಪ್ರತ್ಯಕ್ಷ ಮಾಡಿರುವ ಅನುಭವೀ ಮೂರ್ತಿ.

11. ನಾನು ಅಧಿಕಾರಿ ಆತ್ಮ.

12. ನಾನು ತಂದೆ ಮತ್ತು ವಾರಸತ್ವವನ್ನು ಸ್ಮೃತಿಯಲ್ಲಿಟ್ಟುಕೊಂಡು ಸ್ಥಿರವಾಗಿ ಇದ್ದೇನೆ.

13. ನಾನು ಮೊದಲು ಮನನ ಮಾಡಿ ನಂತರ ವರ್ಣನೆ ಮಾಡಿ, ಮಗ್ನ ಸ್ಥಿತಿಯಲ್ಲಿ ಇದ್ದೇನೆ.

14. ನಾನು ಜವಾಬ್ದಾರಿಯ ಕಿರೀಟವನ್ನು, ಸ್ಮೃತಿಯ ತಿಲಕವನ್ನು ಧರಿಸಿರುವ ತಂದೆಯ ಹೃದಯ ಸಿಂಹಾಸನಾಧಿಕಾರಿ ಆಗಿದ್ದೇನೆ.